ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **192/2020**

| | | | |
|---|---|---|---|
| ಸಾಕ್ಷಿಯ ಹೆಸರು | : ಹೆಚ್.ಎಸ್ ಸುರೇಶ್ | | ಸಿ.ಡಬ್ಲ್ಯು 19 |
| ತಂದೆಯ ಹೆಸರು | : ಶಂಕರಯ್ಯ ಡಿ | | ಪಿ.ಡಬ್ಲ್ಯು 7 |
| ವಯಸ್ಸು | : 53 ವರ್ಷ | | |
| ಉದ್ಯೋಗ | : ಡಿ.ವಯ್.ಎಸ್.ಪಿ ಲೋಕಾಯುಕ್ತ | | |
| ವಾಸ ಸ್ಥಳ | ಹಾಸನ | | |

ದಿನಾಂಕ:**27-02-2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

ನಾನು ದಿ: 17-09-2019 ರಿಂದ 05-06-2021 ನೇ ಸಾಲಿನಲ್ಲಿ ತರೀಕೆರೆಯಲ್ಲಿ ಪಿ.ಐ ಎಂದು ಕೆಲಸ ಮಾಡಿದ್ದೇನೆ.

ಈ ಪ್ರಕರಣದಲ್ಲಿ ದಿನಾಂಕ 05.01.2021 ರಂದು ಚಾಸ-1 ರವರು ಠಾಣೆಗೆ ಹಾಜರಾಗಿ ಲಿಖಿತ ದೂರಿನ ಅನ್ವಯ ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ. ನಂತರ ಅದೇ ದಿನ ಚಾಸ-18 ರವರಿಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ತೆರಳಿ ಶವ ಪಂಚನಾಮೆಯನ್ನು ಮಾಡಿಕೊಂಡು ಬರುವಂತೆ ಅದೇಶಿಸಿದ್ದೇನೆ. ಅದೇ ದಿನ ಅವರು ಕೊಟ್ಟ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿದ್ದೇನೆ. ದಿನಾಂಕ 06.01.2020 ರಂದು ಗುನ್ನಾ ಸ್ಥಳಕ್ಕೆ ಭೇಟಿ ಕೊಟ್ಟು ಚಾಸ-3 ಮತ್ತು 9 ರವರ ಸಮಕ್ಷಮ ಚಾಸ-1 ರವರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಮದ್ಯಾಹ್ನ 12 ರಿಂದ 1 ಗಂಟೆಯ ಮಧ್ಯದಲ್ಲಿ ಜರುಗಿಸಿದ್ದೇನೆ. ಆ ಸಮಯಕ್ಕೆ ಕಚ್ಚಾ ನಕ್ಷೆ ಬಿಡಿಸಿ ಭಾವಚಿತ್ರವನ್ನು ಕೂಡ ತೆಗೆಸಿದ್ದೇನೆ. ಅದೇ ದಿನ ಅದೇ ಪಂಚರ ಸಮಕ್ಷಮದಲ್ಲಿ ಠಾಣಾ ಆವರಣದಲ್ಲಿ ಮದ್ಯಾಹ್ನ 2.30 ರಿಂದ 3.30 ರ ಮಧ್ಯದಲ್ಲಿ ಅಪಘಾತದ ಪಡಿಸಿದ ವಾಹನ ನಂ.ಕೆ.ಎ.51 ಹೆಚ್.ಹೆಚ್.7369 ನೇದ್ದನ್ನು ಅಮಾನತ್ತು ಪಡಿಸಿಕೊಂಡಿದ್ದೇನೆ. ದಿನಾಂಕ 05.01.2020 ರಂದು ಚಾಸ-10 ರವರ ಹೇಳಿಕೆಯನ್ನು ಮತ್ತು ದಿನಾಂಕ 06.01.2020 ರಂದು ಚಾಸ-11 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ದಿನಾಂಕ 06.01.2020 ರಂದೇ ಐ.ಎಂ. ವಿ ವರದಿಯ ನಂತರ ವಾಹನವನ್ನು ಸೂಕ್ತ ನಂತರ ದಾಖಲಾತಿಗಳನ್ನು ಪಡೆದುಕೊಂಡು ಮಾಲೀಕರ ಮಧ್ಯಂತರ ವಶಕ್ಕೆ ಬಿಟ್ಟು ಕೊಟ್ಟಿದ್ದೇನೆ. ದಿನಾಂಕ 28.01.2020 ರಂದು ಐ.ಎಂ. ವರದಿ ಪಡೆದುಕೊಂಡು ಕಡತಕ್ಕೆ ಅಳವಡಿಸಿದ್ದೇನೆ. ದಿನಾಂಕ 07.02.2020 ರಂದು ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ದಿನಾಂಕ 14.02.2020 ರಂದು ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ.

ಪ್ರ.ವ.ವರದಿಯನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು, ಪಿ.ಎಂ. ವರದಿಯನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ), ಐ.ಎಂ.ವಿ ವರದಿಯನ್ನು ನಿಪಿ-13 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು, ಭದ್ರತಾ ಪತ್ರವನ್ನು ನಿಪಿ-14 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಅಮಾನತ್ತು ಮಹಜರ್ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು. ನಿಪಿ-5 ರ ಮೇಲಿನ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ನಿಪಿ-4 ಮತ್ತು 6 ಭಾವಚಿತ್ರಗಳಲ್ಲಿ ನಾನು ಇದ್ದೇನೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ನಾನು ಯಾವುದೇ ಪ್ರ.ವ.ವರದಿಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ, ಸ್ಥಳ ತನಿಖೆ ಮಾಡಿಲ್ಲ, ಜಪ್ತಿ ಪಂಚನಾಮೆಯನ್ನು ಕೂಡ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಂದೆ ಸಾಕ್ಷಿದಾರರು ಯಾವುದೇ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-11 ರಿಂದ 14 ಗಳನ್ನು ಈ ಪ್ರಕರಣಕ್ಕೆ ಅನುಕೂಲ ಆಗುವ ರೀತಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪು ಇಲ್ಲವೆಂದು ಗೊತ್ತಿದ್ದರೂ ಕೂಡ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಮೃತರು ಬೀರೂರು ಕಡೆಯಿಂದ ತರೀಕೆರೆಯ ಕಡೆಗೆ ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಈ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಏಕಾಏಕಿ ರಸ್ತೆಯನ್ನು ದಾಟಲು ಹೋಗಿ ಅಪಘಾತದ ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.